**ಪ್ರಾಸಾ-10, ಮಹಾಂತೇಶ ಚವಾಣ ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 15.04.2025.**

**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ**

17. ನಾನು, ಪ್ರಾಸಾ-11, ಚಾಸಾ-11, 12 ಆಪ್ತರಿರುತ್ತೇವೆ ಎಂದರೆ ಸರಿಯಲ್ಲ. ನಾನು, ಪ್ರಾಸಾ-11, ಚಾಸಾ-11, 12 ರವರು ಸೇರಿ ಸಮಾಜಕ್ಕೆ ಸೇರಿದ ಕೆಲಸವನ್ನು ಮಾಡುತ್ತೇವೆ ಎಂದರೆ

ಸರಿ. ಮೃತ ಸೋಮಲೆಪ್ಪ ನಾಯಕ ಇವರು ನಮ್ಮ ಸಮಾಜದ ನಾಯಕನಾಗಿದ್ದರು ಮತ್ತು ತಾಂಡಾದ ಕಾರ್ಯಕ್ರಮಗಳನ್ನು ಆತನ ನಾಯಕತ್ವದಲ್ಲಿಯೇ ಮಾಡುತ್ತಿದ್ದೆವು ಎಂದರೆ ಸರಿ. ಮೃತ ಸೋಮಲೆಪ್ಪ ನಾಯಕ ಇವರು ನನಗೆ ಬೇಕಾದವರಾಗಿದ್ದರು ಎಂದರೆ ಸರಿಯಲ್ಲ. ಮೃತ ಸೋಮಲೆಪ್ಪ ನಾಯಕನು ನಾಯಕನಾಗಿದ್ದರಿಂದ ಆತನ ಕುಟುಂಬದವರಿಗೆ ನಾವು ಗೌರವ ಕೊಡುತ್ತಿದ್ದೆವು ಎಂದರೆ ಸರಿ.

18. ಆರೋಪಿಯು ನನಗೆ ಪರಿಚಯ ಇದ್ದು, ಆತ ಒಕ್ಕಲುತನ ಮಾಡಿಕೊಂಡಿದ್ದನು. ಸುಗ್ಗಿ ಸಮಯದಲ್ಲಿ ಆರೋಪಿಯು ಬೇರೆ ಮಾಲೀಕರನ್ನು ಕರೆದುಕೊಂಡು ಬಂದು ಗೋವಿನ ಜೋಳದ ವ್ಯಾಪಾರ ಮಾಡಿಸುತ್ತಿದ್ದನು.

19. ಆರೋಪಿ ಮತ್ತು ಆತನ ಹೆಂಡತಿಯ ಮಧ್ಯ ಜಗಳ ಇದ್ದ ಬಗ್ಗೆ ವೈಯಕ್ತಿಕ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು, ಅವರು ಮೃತ ಸೋಮಲೆಪ್ಪನ ಮುಂದೆ ಬಂದು ಹೇಳಿದ್ದರಿಂದ, ನನಗೆ ಆ ಬಗ್ಗೆ ಗೊತ್ತು ಎಂದು ಹೇಳಿರುತ್ತಾರೆ. ಆರೋಪಿ ಮತ್ತು ಆತನ ಹೆಂಡತಿ ಸೋಮಲೆಪ್ಪ ನಾಯಕ ಇವರ ಮುಂದೆ ತಮ್ಮ ಮಧ್ಯ ಜಗಳ ಇದ್ದ ಬಗ್ಗೆ ಯಾವಾಗ ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

20. ಊರಿನ ಹಿರಿಯರೆಲ್ಲರೂ ಚಂದಾಪುರಕ್ಕೆ ಆರೋಪಿ ಮತ್ತು ಆತನ ಹೆಂಡತಿಯ ಮಧ್ಯ ಇರುವ ಜಗಳವನ್ನು ಬಗೆಹರಿಸಲು ಹೋಗಿದ್ದೆವು. ಘಟನೆಗೂ ಎರಡು ತಿಂಗಳುಗಳ ಮುಂಚೆ ಊರಿನ ಹಿರಿಯರೆಲ್ಲರೂ ಚಂದಾಪುರಕ್ಕೆ ಹೋಗಿದ್ದೆವು. ಆ ಪಂಚಾಯತಿಯಲ್ಲಿ ಚಂದಾಪುರ ತಾಂಡಾದಿಂದ ಯಾರು ಯಾರು ಇದ್ದರು ಎಂದು ಅವರ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಪಂಚಾಯತಿಯು ಆ ದಿನ ಬೆಳಿಗ್ಗೆ 12.00 ರಿಂದ ಸಂಜೆ 06.00 ಗಂಟೆಯವರೆಗೆ ಆಗಿರುತ್ತದೆ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಈ ಬಗ್ಗೆ ನಾನು ಮುಂಡರಗಿ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿ.

21. ದಿಃ 04.03.2022 ರಂದು ರಾತ್ರಿ 08.00 ಗಂಟೆ ಸುಮಾರಿಗೆ ನಾನು, ಮೃತ ಸೋಮಲೆಪ್ಪ ನಾಯಕ, ಚಾಸಾ-10 ರಿಂದ 12 ರವರು ಸೇವಾಲಾಲ ದೇವಸ್ಥಾನದಲ್ಲಿ ಅದರ ಉದ್ಘಾಟನೆಗೆ ಸಂಬಂಧಿಸಿದಂತೆ ಸೇರಿದ್ದಾಗ, ಅಲ್ಲಿಗೆ ಆರೋಪಿಯು ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ಬಂದು, ಮೃತ ಸೋಮಲೆಪ್ಪ ನಾಯಕನಿಗೆ ಏ ನಾಯಕ ನನ್ನ ಸಂಸಾರವನ್ನು ನೀನು ಸರಿ ಮಾಡಿಲ್ಲ, ಹೊರಗೆ ಬಾ ನಿನಗೆ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು ಹೇಳಿರುತ್ತಾನೆ ಮತ್ತು ಆಗ ಸೇರಿದ್ದ ನಾವೆಲ್ಲರೂ ಆರೋಪಿಗೆ ಸರಿಯಾಗಿ ಮಾತನಾಡಬೇಕೆಂದು ಹೇಳಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ಆರೋಪಿಯು ಚಪ್ಪಲಿಯನ್ನು ಹೊರಗೆ ಒಗೆದು, ದೇವಸ್ಥಾನದ ಒಳಗಡೆ ಬಂದಿದ್ದು, ಆಗ ನಾವು ಆತನನ್ನು ತಡೆಯಲು ಪ್ರಯತ್ನಿಸಿದರೂ ಕೂಡಾ, ಆತನು ದೇವಸ್ಥಾನದ ಕಂಬದ ಹತ್ತಿರ ಕುಳಿತಿದ್ದ

ಸೋಮಲೆಪ್ಪ ನಾಯಕನಿಗೆ ಕಾಲಿನಿಂದ ಒದ್ದಿರುತ್ತಾನೆ ಮತ್ತು ಸೋಮಲೆಪ್ಪನ ಶರ್ಟನ್ನು ಹಿಡಿದು ಜಗ್ಗಿರುತ್ತಾನೆ ಮತ್ತು ತನ್ನ ಹತ್ತಿರ ಇದ್ದ ಚಾಕುವಿನಿಂದ ಸೋಮಲೆಪ್ಪನ ಗದ್ದಕ್ಕೆ, ಹೊಟ್ಟೆಗೆ, ಕೈಗೆ, ಕುತ್ತಿಗೆಗೆ ಚುಚ್ಚಿದ್ದರಿಂದಾಗಿ ಸೋಮಲೆಪ್ಪನಿಗೆ ಭಾರೀ ರಕ್ತ ಗಾಯವಾಗಿರುತ್ತದೆ ಮತ್ತು ದೇವಸ್ಥಾನದ ತುಂಬೆಲ್ಲಾ ರಕ್ತವಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಆರೋಪಿಯ ಹತ್ತಿರ ಇದ್ದ ಇನ್ನೊಂದು ಚೂರಿಯನ್ನು ತೆಗೆದುಕೊಂಡು ಮುಂಡರಗಿ ಪೋಲೀಸ ಠಾಣೆಗೆ ಹೋಗಿ ಅದನ್ನು ಒಪ್ಪಿಸಿ ಬಂದಿರುತ್ತೇನೆ ಎಂದು ನ್ಯಾಯಾಧೀಶರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿರುತ್ತೇನೆ.

24. ವಿಷಯ ತಿಳಿದ ನಂತರ ಪ್ರಾಸಾ-1, 5 ಮತ್ತು 6 ರವರು ಸ್ಥಳಕ್ಕೆ ಬಂದಿರುತ್ತಾರೆ ಮತ್ತು ನಾನು ಹಾಗೂ ಚಾಸಾ-10 ರವರು ನಡೆದ ವಿಷಯವನ್ನು ಪ್ರಾಸಾ-1 ರವರಿಗೆ ತಿಳಿಸಿರುತ್ತೇವೆ ಮತ್ತು ಹಾಗೆಯೇ ಪ್ರಾಸಾ-5 ಮತ್ತು 6 ರವರಿಗೂ ಕೂಡಾ ವಿಷಯವನ್ನು ತಿಳಿಸಿರುತ್ತೇವೆ ಮತ್ತು ನಂತರ ಪ್ರಾಸಾ-1 ಮತ್ತು 5 ರವರು ಪ್ರಾಸಾ-6 ರವರ ವಾಹನದಲ್ಲಿ ಸೋಮಲೆಪ್ಪ ನಾಯಕ ಇವರನ್ನು ಗದಗನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವೈದ್ಯರು ಸೋಮಲೆಪ್ಪ ನಾಯಕ ಮೃತಪಟ್ಟಿರುತ್ತಾರೆ ಎಂದು ಹೇಳಿರುತ್ತಾರೆ ಮತ್ತು ಆಗ ಸಮಯ ರಾತ್ರಿ 09.45 ಗಂಟೆಯಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

25. ದೂರನ್ನು ನಾನು ಮೃತ ಸೋಮಲೆಪ್ಪ ನಾಯಕ ಇವರ ಮನೆಯ ಬಾಜುನಲ್ಲಿರುವ ಚಾವಣಿಯಲ್ಲಿ ಬರೆದಿರುತ್ತೇನೆ. ದೂರನ್ನು ಬರೆಯಲು ಅರ್ಧ ಗಂಟೆ ಹಿಡಿದಿರುತ್ತದೆ. ಪ್ರಾಸಾ-1 ರವರು ಹೇಳುತ್ತಾ ಹೋದಂತೆ ನಾನು ದೂರನ್ನು ಬರೆದಿರುತ್ತೇನೆ. ದೂರನ್ನು ಬರೆದ ನಂತರ ಪ್ರಾಸಾ-1 ರವರಿಗೆ ಅದನ್ನು ಓದಿ ಹೇಳಿರುತ್ತೇನೆ. ದೂರನ್ನು ಓದಿ ಹೇಳಲು 10 ನಿಮಿಷ ಹಿಡಿದಿರುತ್ತದೆ. ನಾನು ದೂರನ್ನು ಬರೆಯುವಾಗ, ಬಹಳಷ್ಟು ಪೋಲೀಸರು ಸ್ಥಳದಲ್ಲಿ ಇದ್ದರು.

26. ನಾನು, ಪ್ರಾಸಾ-11, ಚಾಸಾ-11, 12 ರವರು ಆರೋಪಿಯ ವಿರುದ್ಧ ದ್ವೇಷ ಇದ್ದುದರಿಂದ ಆತನ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಘಟನೆ ನಡೆದಾಗ, ಆರೋಪಿಯು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

27. ಆರೋಪಿಯ ಹತ್ತಿರ ಇದ್ದ ಇನ್ನೊಂದು ಚೂರಿಯನ್ನು ಕಸಿದುಕೊಂಡು ಒಗೆದಿರುತ್ತೇನೆ ಎಂದು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

28. ಆರೋಪಿಯಿಂದ ಕಸಿದುಕೊಂಡ ಇನ್ನೊಂದು ಚೂರಿಯನ್ನು ನಾನು ನಮ್ಮ ಮನೆಯಲ್ಲಿ ಇಟ್ಟಿದ್ದೆನು ಮತ್ತು ದಿಃ 06.03.2022 ರಂದು ನಾನು ಮುಂಡರಗಿ ಪೋಲೀಸ ಠಾಣೆಗೆ ಹೋಗಿ ಸದರಿ ಚೂರಿಯನ್ನು ಹಾಜರಪಡಿಸಿರುತ್ತೇನೆ ಮತ್ತು ಆಗ ಪೋಲೀಸರು ಸದರಿ ಚೂರಿಯನ್ನು ಚಾಸಾ-8 ಮತ್ತು

ಪ್ರಾಸಾ-5 ರವರ ಸಮಕ್ಷಮ ಬೆಳಿಗ್ಗೆ 08.30 ರಿಂದ 09.15 ರ ವರೆಗೆ ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ ಮತ್ತು ಆ ಸಮಯದಲ್ಲಿ ನಿಪಿ-17 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

29. ನಿಪಿ-2 ಮತ್ತು 3 ರಲ್ಲಿ ದೇವಸ್ಥಾನದ ಭಾವಚಿತ್ರಗಳು ಇರುತ್ತವೆ ಮತ್ತು ನಿಪಿ-3 ರಲ್ಲಿ ಗುನ್ನಾ ಸ್ಥಳದ ಭಾವಚಿತ್ರ ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

30. ಮೃತ ಸೋಮಲೆಪ್ಪ ನಾಯಕನು ತನ್ನ ಸಂಸಾರವನ್ನು ಸರಿಪಡಿಸಲಿಲ್ಲ ಎಂಬ ದ್ವೇಷವನ್ನು ಇಟ್ಟುಕೊಂಡು, ಆರೋಪಿ ಆತನನ್ನು ಕೊಲೆ ಮಾಡಿರುತ್ತಾನೆ ಮತ್ತು ಹಾಗೆಯೇ ಸೋಮಲೆಪ್ಪ ನಾಯಕನನ್ನು ಯಾವುದಾದರೂ ಕಾರ್ಯಕ್ರಮಗಳಲ್ಲಿ ನೋಡಿದಾಗ, ತನ್ನ ಸಂಸಾರವನ್ನು ಸರಿ ಮಾಡದೇ ಇದ್ದುದರಿಂದ ಹೊಡೆಯುವುದಾಗಿ ಆರೋಪಿಯು ಹೇಳುತ್ತಿದ್ದನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**